ನಿಮ್ಮೊಡನೆ

# ಕೆಲಸ ಇದೆ, ನೇಮಕಾತಿ ಇಲ್ಲ!

ನಿರುದ್ಯೋಗಿಗಳ ಸಂಖ್ಯೆ ದುಪ್ಪಟ್ಟಾಗಿದೆ. ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ಖಾಲಿ ಬಿದ್ದಿರುವ ಲಕ್ಷಾಂತರ ಹುದ್ದೆಗಳನ್ನೂ ತುಂಬುತ್ತಿಲ್ಲ. ನಾವು ಎತ್ತ ಸಾಗುತ್ತಿದ್ದೇವೆ?

ದೇಶ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ನಿರುದ್ಯೋಗದ್ದು. ಲಕ್ಷಾಂತರ ಜನ ಪದವೀಧರರು, ಸ್ನಾತಕೋತ್ತರ ಪದವೀಧರರು, ತಂತ್ರಜ್ಞಾನ ಪದವೀಧರರು ದೇಶದಲ್ಲಿದ್ದಾರೆ. ಲಕ್ಷಾಂತರ ಜನ ನಿರುದ್ಯೋಗಿಗಳಾಗಿದ್ದಾರೆ. ಬಹುತೇಕರಿಗೆ ಅವರ ಅರ್ಹತೆಗೆ ತಕ್ಕ ಕೆಲಸ ಸಿಕ್ಕಿಲ್ಲ. ಕಳೆದ ಒಂಭತ್ತು ತಿಂಗಳಲ್ಲೇ ನಿರುದ್ಯೋಗಿಗಳ ಸಂಖ್ಯೆ ದುಪ್ಪಟ್ಟಾಗಿದೆ. ಕೇಂದ್ರ ಸರ್ಕಾರ ನೀಡಿರುವ ಅಂಕಿ ಅಂಶಗಳ ಪ್ರಕಾರವೇ, 207ರ ಜುಲೈನಲ್ಲಿ ಶೇಕಡಾ 3.39ರಷ್ಟಿದ್ದ ನಿರುದ್ಯೋಗಿಗಳ ಸಂಖ್ಯೆಯು 2018ರ ಮಾರ್ಚ್ ವೇಳೆಗೆ ಶೇಕಡಾ 6.23ಕ್ಕೇರಿದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ ಸೃಷ್ಟಿ ಆಗಲಿದೆ ಎನ್ನುವ ಕೇಂದ್ರ ಸರ್ಕಾರದ ಘೋಷಣೆ ಕೇವಲ ಭಾಷಣ ಮತ್ತು ಕಾಗದದಲ್ಲೇ ಉಳಿದಿದೆ.

ಹಾಗಿದ್ದರೆ ಹೊಸ ಉದ್ಯೋಗ ಸೃಷ್ಟಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲವೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಹೊಸ ಉದ್ಯೋಗಗಳ ಸೃಷ್ಟಿ ಅಂದುಕೊಂಡ ರೀತಿಯಲ್ಲಿ ನಡೆಯುತ್ತಿಲ್ಲ ಎನ್ನುವುದು ಸ್ಪಷ್ಟ. ಕೈಗಾರಿಕಾ ವಲಯದ ಪ್ರಗತಿ ಮಂದವಾಗಿದೆ. ಕೃಷಿ ವಲಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹೊಸ ಉದ್ಯೋಗಗಳ ಸೃಷ್ಟಿಗೆ ಹೊಸ ಕ್ಷೇತ್ರಗಳನ್ನು ರೂಪಿಸುವ ಯೋಜನೆಗಳೂ ಕಾಣುತ್ತಿಲ್ಲ.

ಹೊಸ ಉದ್ಯೋಗಸೃಷ್ಟಿ ಹಾಗಿರಲಿ, ಸರ್ಕಾರಿ ವಲಯದಲ್ಲಿ ಖಾಲಿ ಬಿದ್ದಿರುವ ಲಕ್ಷಾಂತರ ಉದ್ಯೋಗಗಳನ್ನು ತುಂಬುವ ಕೆಲಸವನ್ನೂ ಸರ್ಕಾರ ಏಕೆ ಮಾಡುತ್ತಿಲ್ಲ? ಸರ್ಕಾರದ ಅಂದಾಜಿನ ಪ್ರಕಾರವೇ ಸುಮಾರು 24 ಲಕ್ಷ ಉದ್ಯೋಗಗಳು ಖಾಲಿ ಉಳಿದಿವೆ. ಸರ್ಕಾರಿ ಶಾಲೆಗಳಲ್ಲಿ 10 ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ ಬಿದ್ದಿವೆ! ಅದರಲ್ಲೂ ಶೇಕಡಾ 90ರಷ್ಟು ಪ್ರಾಥಮಿಕ ಶಿಕ್ಷಣ ವಲಯದಲ್ಲಿದೆ. 5.4 ಲಕ್ಷ ಹುದ್ದೆಗಳು ಪೊಲೀಸ್ ಇಲಾಖೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ 2.2 ಲಕ್ಷ ಕೆಲಸಗಳು ಖಾಲಿ ಉಳಿದಿವೆ. ರೈಲ್ವೆ ಇಲಾಖೆಯಲ್ಲಿ 2.4 ಲಕ್ಷ ಹುದ್ದೆಗಳು, ಆರೋಗ್ಯ ಕ್ಷೇತ್ರದಲ್ಲಿ 1.5 ಲಕ್ಷ ಹುದ್ದೆಗಳು, ಸಶಸ್ತ್ರ ಪಡೆಗಳಲ್ಲಿ 62 ಸಾವಿರ, ಅರೆಮಿಲಿಟರಿ ಪಡೆಗಳಲ್ಲಿ 61 ಸಾವಿರ, ಅಂಚೆ ಇಲಾಖೆಯಲ್ಲಿ 54 ಸಾವಿರ, ನ್ಯಾಯಾಲಯಗಳಲ್ಲಿ 6 ಸಾವಿರ ಹುದ್ದೆಗಳು ಖಾಲಿ ಬಿದ್ದಿವೆ ಎನ್ನುವುದು ಸರ್ಕಾರವೇ ನೀಡಿರುವ ಅಂಕಿ ಅಂಶ.

ಬೇರೆಲ್ಲ ಕ್ಷೇತ್ರಗಳ ವಿಚಾರ ಹಾಗಿರಲಿ, ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹೀಗೆ ಲಕ್ಷಾಂತರ ಶಿಕ್ಷಕರ ಹುದ್ದೆಗಳನ್ನು ತುಂಬದೆ ಖಾಲಿ ಉಳಿಸುವುದರ ಪರಿಣಾಮ ಏನಾಗಬಹುದು? ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಕೊರತೆ. ಇದು, ಪೋಷಕರನ್ನು ಅನಿವಾರ್ಯವಾಗಿ ಖಾಸಗಿ ಶಿಕ್ಷಣ ಕ್ಷೇತ್ರಕ್ಕೆ ವಲಸೆ ಹೋಗುವಂತೆ ಮಾಡುವ ಪಿತೂರಿಯೆ? ಖಾಸಗಿ ಶಿಕ್ಷಣ ರಂಗದಲ್ಲಿ ಲಕ್ಷಾಂತರ ರೂಪಾಯಿ ಫೀಸು ಕಟ್ಟಿ ಜನರನ್ನು ಸಾಲಿಗರನ್ನಾಗಿ ಮಾಡುವುದಕ್ಕೆ ಸರ್ಕಾರ ಯತ್ನಿಸುತ್ತಿದೆಯೆ? ಅಥವಾ ಸರ್ಕಾರಿ ಶಿಕ್ಷಣ ಕ್ಷೇತ್ರವನ್ನು ಪೂರ್ತಿಯಾಗಿ ಮುಳುಗಿಸಲು ಸರ್ಕಾರವೇ ಹೊರಟಿದೆಯೆ?

ಕರ್ನಾಟಕದಲ್ಲಂತೂ ಶಿಕ್ಷಕರ ನೇಮಕ ಎನ್ನುವುದು ಪ್ರಹಸನದಂತೆ ಕಾಣಿಸುತ್ತಿದೆ. ಹಳೆಯ ಪತ್ರಿಕೆಗಳನ್ನೊಮ್ಮೆ ತಿರುವಿ ಹಾಕಿ. 2012ರ ಆಗಸ್ಟ್‌ನಲ್ಲಿ '12 ಸಾವಿರ ಅತಿಥಿ ಶಿಕ್ಷಕರನ್ನು ಶೀಘ್ರ ನೇಮಿಸಲಾಗುವುದು' ಎಂದು ಆಗಿನ ಶಿಕ್ಷಣ ಸಚಿವರು ಹೇಳಿದ್ದರು. 2104ರಲ್ಲಿ 'ರಾಜ್ಯದಲ್ಲಿ 16 ಸಾವಿರ ಶಿಕ್ಷಕರನ್ನು ಶೀಘ್ರ ನೇಮಕ ಮಾಡಲಾಗುವುದು' ಎಂದು ಸಚಿವರು ಪ್ರಕಟಿಸಿದರು. 2016ರಲ್ಲಿ '18 ಸಾವಿರ ಶಿಕ್ಷಕರ ನೇಮಕ ಶೀಘ್ರ' ಎನ್ನುವ ಶಿಕ್ಷಣ ಸಚಿವರ ಹೇಳಿಕೆ ಪ್ರಕಟವಾಯಿತು. 2017ರ ಮೇ ತಿಂಗಳಲ್ಲಿ, 'ರಾಜ್ಯದಲ್ಲಿ 14729 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಶೀಘ್ರ 10 ಸಾವಿರ ಶಿಕ್ಷಕರ ನೇಮಕ ಮಾಡಲಾಗುವುದು' ಎಂದು ಶಿಕ್ಷಣ ಸಚಿವರು ಪ್ರಕಟಿಸಿದ್ದಾರೆ. ಇದೀಗ ಕಳೆದ ತಿಂಗಳು ಶಿಕ್ಷಣ ಸಚಿವರು, '3100 ಅತಿಥಿ ಶಿಕ್ಷಕರ ಸಹಿತ ಒಟ್ಟು 25,600 ಶಿಕ್ಷಕರನ್ನು ಶೀಘ್ರ ನೇಮಿಸುತ್ತೇವೆ' ಎಂದು ಘೋಷಿಸಿದ್ದಾರೆ. ಈ ಇಷ್ಟೂ ವರ್ಷಗಳಲ್ಲಿ ಇದ್ದ ಶಿಕ್ಷಣ ಸಚಿವರು ಒಬ್ಬರೇ ಅಲ್ಲ; ಪ್ರತಿಸಲವೂ ಶಿಕ್ಷಣ ಸಚಿವರು ಬದಲಾಗಿದ್ದಾರೆ, ಸರ್ಕಾರಗಳು ಬದಲಾಗಿವೆ. ಒಂದು ವಾರ್ಷಿಕ ಸಂಪ್ರದಾಯದಂತೆ ಶಿಕ್ಷಕರ ನೇಮಕದ ಹೇಳಿಕೆಗಳು ಪ್ರಕಟವಾಗುತ್ತವೆ. ಆದರೆ ಹುದ್ದೆಗಳು ಖಾಲಿಯೇ ಇರುತ್ತವೆ.

ಉನ್ನತ ಶಿಕ್ಷಣದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಕೇಂದ್ರ ಸರ್ಕಾರದ ಪ್ರತಿಷ್ಠಿತ ಆರೋಗ್ಯ ಸಂಸ್ಥೆ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸಯನ್ಸ್ (ಏಮ್ಸ್)ನಲ್ಲೇ 22 ಸಾವಿರ ಹುದ್ದೆಗಳು ಖಾಲಿ ಉಳಿದಿವೆ. ಸಿಬಿಎಸ್‌ಇ ಮಂಡಳಿ ಕಳೆದ ವರ್ಷ 'ಟೀಚರ್ಸ್ ಎಲಿಜಿಬಿಲಿಟಿ' ಪರೀಕ್ಷೆಯನ್ನೇ ನಡೆಸಿಲ್ಲ. ಕಾರಣ ಕೇಳಿದರೆ 'ಆಡಳಿತಾತ್ಮಕ ತೊಂದರೆ' ಎನ್ನಲಾಗಿದೆ! ನಾವು ಎತ್ತ ಸಾಗುತ್ತಿದ್ದೇವೆ?

■ **ಬಿ.ಎಂ. ಹನೀಫ್**



ಈಶ್ವರ್